


# ತನ್ನ ಹೆಸರನ್ನು ಕಲಿತ ನದಿ

ದಾಜಿ

ಪೂಜ್ಯ ಬಾಬೂಜಿ ಮಹಾರಾಜರ

127ನೇ ಜಯಂತ್ಯೋತ್ಸವದಂದು ನೀಡಲಾದ ಸಂದೇಶ

ಮೇ 4, 5, ಮತ್ತು 6, 2026, ಯೋಗಾಶ್ರಮ ಷಹಜಹಾನ್‌ಪುರ

# ತನ್ನ ಹೆಸರನ್ನು ಕಲಿತ ನದಿ

## ಭಯದ ಶಕ್ತಿಯು ವಿಶ್ವಾಸದ ಮೂಲವಾದಾಗ

ಪ್ರಿಯ ಸ್ನೇಹಿತರೆ,

ಕೆಲವು ವರ್ಷಗಳ ಹಿಂದೆ, ಮುಂಜಾನೆಯ ಧ್ಯಾನದ ಬೈಠಕಿನ ನಂತರ ಒಬ್ಬ ಯುವತಿ ನನ್ನ ಬಳಿ ಬಂದಳು. ಆಕೆ ಹಲವಾರು ವರ್ಷಗಳಿಂದ ಶ್ರದ್ಧಾಪೂರ್ವಕವಾಗಿ ಸಾಧನೆ ಮಾಡುತ್ತಿದ್ದು, ಆಕೆಯಲ್ಲಾದ ಬದಲಾವಣೆಗಳು ಎಲ್ಲರಿಗೂ ಗೋಚರವಾಗುವಂತಿದ್ದವು. ಆಕೆಯ ಉಪಸ್ಥಿತಿಯಲ್ಲಿ ಜಡತ್ವವಿರದೆ, ಮೃದುವಾದ, ಗಾಢವಾದ ಶಾಂತಿಯ ಅಭಿವ್ಯಕ್ತಿಯಿತ್ತು. ಆದಾಗ್ಯೂ ಅಂದು ಮುಂಜಾನೆ ಆಕೆಯ ಮೊಗದಲ್ಲಿ ಒಂದು ಬಗೆಯ ಗೊಂದಲವಿತ್ತು; ಅದು ಯಾವುದರದೋ ಅಂಚಿನಲ್ಲಿ ನಿಂತು ಪದಗಳಿಗಾಗಿ ತಡಕಾಡಿದಂತೆ.

ಆಕೆ, "ದಾಜಿ, ಇಂದು ಧ್ಯಾನದಲ್ಲಿ ವಿಚಿತ್ರವಾದುದೇನೋ ಆಯಿತು. ನನ್ನಲ್ಲಿ ಭಯವಿತ್ತು. ನಾನು ಆ ಪರಿಚಿತ ಬಿಗಿತವನ್ನು ಗುರುತಿಸಿದೆ, ಆದರೆ ಈ ಬಾರಿ, ಅದರೊಂದಿಗೆ ಸೆಣಸುವ ಅಥವಾ ಅದನ್ನು ಶುದ್ಧೀಕರಿಸಲೆತ್ನಿಸುವ ಬದಲು, ನಾನು ಸುಮ್ಮನೆ ವೀಕ್ಷಿಸಿದೆ. ನೋಡುತ್ತಿದ್ದಂತೆ, ಭಯವು ಹಂಬಲದಂತೆ ಅನ್ನಿಸಿದ್ದನ್ನು ಗಮನಿಸಿದೆ. ಒಂದೇ ವಿಷಯ ವಿಭಿನ್ನ ಮುಖಗಳನ್ನು ಧರಿಸಿದಂತಿತ್ತು. ಇದು ಸಾಧ್ಯವೆ? ಅಥವಾ ನನ್ನ ಕಲ್ಪನೆಯೆ?" ಎಂದು ಕೇಳಿದಳು.

ಅದು ಅವಳ ಕಲ್ಪನೆಯಾಗಿರಲಿಲ್ಲ. ಪ್ರಾಚೀನ ಋಷಿಮುನಿಗಳು ಯಾವುದನ್ನು ವ್ಯಕ್ತಪಡಿಸಲು ಜೀವಮಾನಗಳನ್ನೇ ಕಳೆದರೊ, ಅದನ್ನು ಆಕೆ ಒಂದು ಪ್ರಶಾಂತ ಬೈಠಕಿನಲ್ಲಿ ಕಂಡುಕೊಂಡಳು. ಭಯ ಅತಿ ಅಸೂಯೆಯಿಂದ ಕಾಯುವ ರಹಸ್ಯವನ್ನು ಆಕೆ ಕಂಡುಕೊಂಡಿದ್ದಳು: ಭಯವು ಆತ್ಮದ ಹೊರಗಿನಿಂದ ಬರದೆ, ಸ್ವತಃ ಆತ್ಮದ ಚೈತನ್ಯವೇ ತಪ್ಪು ದಿಶೆಗೆ ಹೊರಳುವುದರಿಂದ ಬರುತ್ತದೆ.

ಜನವರಿ ಹಾಗು ಫೆಬ್ರವರಿಯ ಭಂಡಾರ ಸಂದೇಶಗಳ ಸರಣಿಯಲ್ಲಿ, ನಾವು ಒಂದೇ ಪ್ರಶ್ನೆಯನ್ನು ಕೇಳುತ್ತಿದ್ದೆವು: ತಮಗಾಗಿ ಕಾಯುವ ಬದುಕನ್ನು ಜೀವಿಸದಂತೆ ಸಾಧಕನನ್ನು ತಡೆಯುವುದು ಯಾವುದು? ಹಾಗೆಯೆ ನಾವು ಏಳು ನೆರಳುಗಳ ಮೂಲಕ ಸಾಗಿದೆವು: ಬಯಕೆಯ ವಿಭಜನೆ, ಉದ್ದೇಶದ ನಿದ್ರಾವಸ್ಥೆ, ಸಂಶಯದ ಕೊರೆತ, ಗರ್ವದ ಅಗೋಚರ ಛಾವಣಿ, ಮತ್ಸರವು ಕಡ ತಂದ ಗಾಯ, ಪೂರ್ವಗ್ರಹದ ಬಣ್ಣದ ಗಾಜು ಹಾಗು ಕೊನೆಯಲ್ಲಿ, ಉಳಿದೆಲ್ಲದರೊಳಗೆ ಅಡಗಿಕುಳಿತ, ಸಾಧ್ಯವಾದ ಸಕಲ ವೇಷಗಳನ್ನೂ ಧರಿಸುವ ಭಯ; ಅದು ಏಳನೆಯ ವಿಷವಲ್ಲ, ಮೊದಲನೆಯದು. ಆಗ ನಾವು ತೆರೆದ ಬಾಗಿಲಿನಲ್ಲಿ ನಿಂತಿದ್ದೆವು.

ನಾವು ಮಿತಿಯನ್ನು ದಾಟಿ, ಬೆಳವಣಿಗೆಯತ್ತ ಸಾಗುವ ಮುನ್ನ, ಆ ಯುವತಿ ನಿಜವಾಗಲೂ ಏನನ್ನು ಕಂಡುಕೊಂಡಳೆಂದು ಅರಿತುಕೊಳ್ಳಲು ಕೊಂಚ ತಡೆಯುವುದೊಳಿತು. ಆಕೆ ಪಡೆದ ಕ್ಷಣದರ್ಶನದಲ್ಲಿ, ಹಿಂದಿನ ಸಂದೇಶಗಳಲ್ಲಿ ನಾವು ಗುರುತಿಸಿದ ಬಾಧಕಗಳನ್ನು, ನಾವು ಬೆಳೆಸಿಕೊಳ್ಳಬೇಕೆಂದಿರುವ ಸಾಧಕಗಳೊಂದಿಗೆ ಸಂಪರ್ಕಿಸುವ ಕೀಲಿಕೈ ಇದೆ. ಆಕೆ ಕಂಡುಕೊಂಡ ಸಾಮರ್ಥ್ಯ ಹೊಸದೇನಲ್ಲ. ಎಂದಿನಿಂದಲೂ ನಮ್ಮೊಳಗೇ ಇದ್ದ ಅದು, ತನ್ನ ನಿಜಸ್ವರೂಪವನ್ನು ನಾವು ಅರಿಯುವುದನ್ನೇ ಕಾಯುತ್ತಿತ್ತು.

ತಮಗಾಗಿ ಕಾಯುವ ಬದುಕನ್ನು ಜೀವಿಸದಂತೆ ಸಾಧಕನನ್ನು ತಡೆಯುವುದು ಯಾವುದು? ಹಾಗೆಯೆ ನಾವು ಏಳು ನೆರಳುಗಳ ಮೂಲಕ ಸಾಗಿದೆವು: ಬಯಕೆಯ ವಿಭಜನೆ, ಉದ್ದೇಶದ ನಿದ್ರಾವಸ್ಥೆ, ಸಂಶಯದ ಕೊರೆತ, ಗರ್ವದ ಅಗೋಚರ ಛಾವಣಿ, ಮತ್ಸರವು ಕಡ ತಂದ ಗಾಯ, ಪೂರ್ವಗ್ರಹದ ಬಣ್ಣದ ಗಾಜು ಹಾಗು ಕೊನೆಯಲ್ಲಿ, ಉಳಿದೆಲ್ಲದರೊಳಗೆ ಅಡಗಿಕುಳಿತ, ಸಾಧ್ಯವಾದ ಸಕಲ ವೇಷಗಳನ್ನೂ ಧರಿಸುವ ಭಯ; ಅದು ಏಳನೆಯ ವಿಷವಲ್ಲ, ಮೊದಲನೆಯದು. ಆಗ ನಾವು ತೆರೆದ ಬಾಗಿಲಿನಲ್ಲಿ ನಿಂತಿದ್ದೆವು.

## ಆತ್ಮಕ್ಕೆ ಈಗಾಗಲೇ ಪರಿಚಿತವಾದ ಪದ

ಸಂಸ್ಕೃತದಲ್ಲಿ ಈ ಸಾಮರ್ಥ್ಯಕ್ಕೆ 'ಶ್ರದ್ಧಾ' ಎಂಬ ಶಬ್ದ ನೀಡಲಾಗಿದೆ. ಇದನ್ನು ಸಾಮಾನ್ಯವಾಗಿ 'ವಿಶ್ವಾಸ' (faith) ಎಂದು ಅನುವಾದಿಸಲಾದರೂ, ಅದರ ಗೂಢಾರ್ಥವನ್ನು ತಿಳಿದುಕೊಳ್ಳುವುದು ಒಳ್ಳೆಯದು. ಈ ಶಬ್ದ ಎರಡು ಮೂಲ ಶಬ್ದಗಳಿಂದ ಬಂದಿದೆ. ಮೊದಲನೆಯದು, 'ಶ್ರದ್', ಅಂದರೆ ಹೃದಯದಾಂತರಾಳದ ಗುರುತಿನ ಸ್ಥಾನ; ಬುದ್ಧಿ ಚಿಂತಿಸುವ ಮೊದಲೇ ಅದು ಸತ್ಯವೆಂದು

ತಿಳಿದುಕೊಳ್ಳುವ ಸ್ಥಾನ. ಎರಡನೆಯದು, 'ಧಾ' ಅಂದರೆ ದೃಢವಾಗಿ ನೆಲೆಗೊಳಿಸುವುದು. ಒಟ್ಟಾಗಿ ಅವು ನಮಗೆ ನೀಡುವ ಅರ್ಥವನ್ನು 'ವಿಶ್ವಾಸ'ದ ಬಗೆಗಿನ ಸಾಮಾನ್ಯ ತಿಳಿವಳಿಕೆ ನೀಡಲಾರದು: ಸತ್ಯದೊಳಕ್ಕೆ ನಮ್ಮನ್ನು ನೆಲೆಗೊಳಿಸಲು ಹೃದಯವನ್ನು ಎಲ್ಲೋ ಒಂದೆಡೆ ಸ್ಥಿತಗೊಳಿಸುವುದು.

ಅಭಿಪ್ರಾಯವನ್ನು ಆಯ್ದುಕೊಳ್ಳುವ ರೀತಿಯಲ್ಲಿ ಶ್ರದ್ಧೆಯನ್ನು ನಾವು ಆಯ್ದುಕೊಳ್ಳುವುದಿಲ್ಲ. ಬದಲಾಗಿ, ಅದು ದಿಕ್ಸೂಚಿಯು ಉತ್ತರ ದಿಕ್ಕನ್ನು ಕಂಡುಕೊಳ್ಳುವ ರೀತಿಯಲ್ಲಿ, ವಾದಗಳಿಂದಲ್ಲದೆ, ಗುರುತಿಸುವುದರಿಂದ ಉದಯಿಸುತ್ತದೆ. ಅದು ನಮ್ಮಲ್ಲಿರುವ ನಂಬಿಕೆಯಲ್ಲ, ಅದು ನಾವು ನಿಂತ ನೆಲ.

## ಭಯವು ವಿಶ್ವಾಸದ ವಿರುದ್ಧ ಪದವಲ್ಲ

ಆ ಯುವತಿಯ ಪ್ರಶ್ನೆಗೆ ಹಿಂತಿರುಗೋಣ, ಏಕೆಂದರೆ ಆಕೆ ನಿಜವಾಗಿಯೂ ಮುಖ್ಯವಾದುದನ್ನು ಕಂಡುಕೊಂಡಿದ್ದಳು. ಭಯ ಮತ್ತು ಹಂಬಲ, ಇವೆರಡೂ ವಿಭಿನ್ನ ಮುಖವಾಡ ತೊಟ್ಟ ಒಂದೇ ಗುಣವಾಗಿರುವುದನ್ನು ಆಕೆ ಗಮನಿಸಿದ್ದಳು. ರೂಪಕಾರ್ಥದಲ್ಲಿ ಅಲ್ಲದಿದ್ದರೂ ರಚನಾತ್ಮಕವಾಗಿ ಆಕೆ ಹೇಳಿದ್ದು ಸರಿ.

ಭಯ ಹೇಗೆ ಕೆಲಸ ಮಾಡುತ್ತದೆ? ಅಪಾಯವೊಂದು ವಾಸ್ತವ ಮತ್ತು ಅನಿವಾರ್ಯವೆನಿಸಿದಾಗ, ಪ್ರಜ್ಞಾಪೂರ್ವಕ ವಿಚಾರದ ಮಿತಿಯೊಳಗೆ ಭಯ ಉದ್ಭವಿಸುತ್ತದೆ. ಶರೀರ ಬಿಗಿಗೊಳ್ಳುತ್ತದೆ ಹಾಗು ನಿರ್ಧಾರಗಳು ಕಲ್ಪಿತ ಅನಾಹುತದಿಂದ ರೂಪುಗೊಳ್ಳುತ್ತವೆ. ತಪ್ಪಿಸಿಕೊಳ್ಳುವುದು,

ಈ ಶಬ್ದ ಎರಡು ಮೂಲ ಶಬ್ದಗಳಿಂದ ಬಂದಿದೆ. ಮೊದಲನೆಯದು, 'ಶ್ರದ್', ಅಂದರೆ ಹೃದಯದಾಂತರಾಳದ ಗುರುತಿನ ಸ್ಥಾನ; ಬುದ್ಧಿ ಚಿಂತಿಸುವ ಮೊದಲೇ ಅದು ಸತ್ಯವೆಂದು ತಿಳಿದುಕೊಳ್ಳುವ ಸ್ಥಾನ. ಎರಡನೆಯದು, 'ಧಾ' ಅಂದರೆ ದೃಢವಾಗಿ ನೆಲೆಗೊಳಿಸುವುದು. ಒಟ್ಟಾಗಿ ಅವು ನಮಗೆ ನೀಡುವ ಅರ್ಥವನ್ನು 'ವಿಶ್ವಾಸ'ದ ಬಗೆಗಿನ ಸಾಮಾನ್ಯ ತಿಳಿವಳಿಕೆ ನೀಡಲಾರದು: ಸತ್ಯದೊಳಕ್ಕೆ ನಮ್ಮನ್ನು ನೆಲೆಗೊಳಿಸಲು ಹೃದಯವನ್ನು ಎಲ್ಲೋ ಒಂದೆಡೆ ಸ್ಥಿತಗೊಳಿಸುವುದು.

ರಕ್ಷಿಸುವುದು ಹಾಗು ಸಮರ್ಥಿಸಿಕೊಳ್ಳುವ ಕಡೆಗೆ ಶಕ್ತಿ ಹರಿಯುತ್ತದೆ. ಈಗ, ಇದು ಶ್ರದ್ಧೆಯ ರಚನೆಯಂತೆಯೆ ಇದೆ; ಇದರಲ್ಲೂ ಆಳವಾದ ಆಂತರಿಕ ದೃಢನಿಶ್ಚಯದ ಸಾಮರ್ಥ್ಯ ಹಾಗು ವಿಷಯವೊಂದನ್ನು ಪ್ರಮಾಣೀಕರಿಸುವ ಮುನ್ನವೇ ಸತ್ಯವೆಂದು ಭಾವಿಸುವ ಸಾಮರ್ಥ್ಯವಿದೆ. ದಿಶೆಯೊಂದೇ ವ್ಯತ್ಯಾಸ. ಶ್ರದ್ಧೆಯಲ್ಲಿ ಹೃದಯವು ತನ್ನನ್ನು ಸತ್ಯದೆಡೆಗೆ ಇರಿಸಿದರೆ, ಭಯದಲ್ಲಿ ಹೃದಯವು ತನ್ನನ್ನು ಅಪಾಯದೆಡೆಗೆ ಇರಿಸುತ್ತದೆ.

ಸರಿಯಾಗಿ ಅರ್ಥೈಸಿಕೊಂಡರೆ, ಭಯವು ಶ್ರದ್ಧೆಯ ವೈರಿಯಲ್ಲ, ಅದು ಬಹಿಷ್ಕೃತ ಶ್ರದ್ಧೆ. ಅದು, ದೃಢನಿಶ್ಚಯ ತುಂಬಿದ, ವಿಕಸನದ ಬದಲು ಸಂಕೋಚನದೆಡೆಗೆ ದಿಕ್ಕು ಬದಲಿಸಿದ ಆತ್ಮದ ಸಾಮರ್ಥ್ಯ. ಆದ್ದರಿಂದಲೇ ಪ್ರತಿಯೊಂದು ನೈಜ ಆಧ್ಯಾತ್ಮಿಕ ಪರಂಪರೆಯೂ ನಿರ್ಭಯತೆಯನ್ನು ಆಂತರಿಕ ವೈರಿಯ ದಮನವೆಂದು ಪರಿಗಣಿಸದೆ, ಪುನರಾಗಮನ ಎನ್ನುತ್ತದೆ. ಅದು, ಎಂದಿನಿಂದಲೂ ನಮ್ಮದೇ ಆಗಿದ್ದು, ಕೊನೆಗೆ ಸರಿಯಾದ ದಿಶೆಯನ್ನು ಕಂಡುಕೊಂಡ ಶಕ್ತಿಯ ವಾಪಸಾತಿಯೆ ಆಗಿದೆ.

ಸರಿಯಾಗಿ ಅರ್ಥೈಸಿಕೊಂಡರೆ, ಭಯವು ಶ್ರದ್ಧೆಯ ವೈರಿಯಲ್ಲ, ಅದು ಬಹಿಷ್ಕೃತ ಶ್ರದ್ಧೆ. ಅದು, ದೃಢನಿಶ್ಚಯ ತುಂಬಿದ, ವಿಕಸನದ ಬದಲು ಸಂಕೋಚನದೆಡೆಗೆ ದಿಕ್ಕು ಬದಲಿಸಿದ ಆತ್ಮದ ಸಾಮರ್ಥ್ಯ. ಆದ್ದರಿಂದಲೇ ಪ್ರತಿಯೊಂದು ನೈಜ ಆಧ್ಯಾತ್ಮಿಕ ಪರಂಪರೆಯೂ ನಿರ್ಭಯತೆಯನ್ನು ಆಂತರಿಕ ವೈರಿಯ ದಮನವೆಂದು ಪರಿಗಣಿಸದೆ, ಪುನರಾಗಮನ ಎನ್ನುತ್ತದೆ. ಅದು, ಎಂದಿನಿಂದಲೂ ನಮ್ಮದೇ ಆಗಿದ್ದು, ಕೊನೆಗೆ ಸರಿಯಾದ ದಿಶೆಯನ್ನು ಕಂಡುಕೊಂಡ ಶಕ್ತಿಯ ವಾಪಸಾತಿಯೆ ಆಗಿದೆ.

ಬೃಹದಾರಣ್ಯಕ ಉಪನಿಷತ್ತು ನೀಡುವ ಸುಳಿವು, ಇಲ್ಲಿ ಬೀಗಕ್ಕೆ ಕೀಲಿಕೈಯಂತೆ ಹೊಂದುತ್ತದೆ: "ದ್ವಿತೀಯಾದ್ವೈ ಭಯಂ ಭವತಿ," ಅರ್ಥಾತ್, ಭಯವು ಎರಡನೆಯ ಅಸ್ತಿತ್ವದಿಂದ ಉದಯಿಸುತ್ತದೆ. ಇಲ್ಲಿ ಎರಡನೆಯ ಅಸ್ತಿತ್ವವೆಂದರೆ, ದ್ವೈತ, ಮೂಲದಿಂದ ಪ್ರತ್ಯೇಕವಾಗಿರುವ ಭಾವ. ಹಾಗಾಗಿ, ಮೂಲದಿಂದ ಪ್ರತ್ಯೇಕವಾಗಿರುವ ಭಾವದಿಂದ ಭಯ ಉದಯಿಸುತ್ತದೆ. ಆತ್ಮವು ಪರಮಮೂಲದೊಂದಿಗಿನ ಸಂಪರ್ಕವನ್ನು ಮರೆತಾಗ, ಅದು, ಬೇರ್ಪಟ್ಟ ಚಿಕ್ಕದಾದ ತನ್ನನ್ನು ರಕ್ಷಿಸಿಕೊಳ್ಳುತ್ತದೆ. ಆಳವಾಗಿ ಮಾನವ ಪ್ರತಿಕ್ರಿಯೆಯಾದ ಆ ರಕ್ಷಣೆಯನ್ನು ಅರ್ಥಮಾಡಿಕೊಳ್ಳಬಹುದು; ಅದೇ ಆತ್ಮವನ್ನು ತನ್ನ ಮೂಲನೆಲೆಗೆ ಮರಳದಂತೆ ತಡೆಯುತ್ತದೆ. ಇದು, ಗಾಳಿ ಬರದಂತೆ ತಡೆಯುವ ಕೋಟೆಯು ಬೆಳಕನ್ನೂ ತಡೆದಂತೆ.

ಮಗು ಮನೆಯ ದಾರಿ ಮರೆತಿದೆಯೆಂದು ಅರಿತ ಪೋಷಕರ ಕೋಮಲಭಾವದಿಂದ ಬಾಬೂಜಿಯವರು ಇದರ ಬಗ್ಗೆ ಹೇಳಿದ್ದಾರೆ. ನಿಮ್ಮಲ್ಲಿರುವ ಭಯವು ಚಾರಿತ್ರ್ಯದೋಷವಲ್ಲ, ಅದು ಮೂಲದಿಂದ ದೂರವಾದ ಆತ್ಮದ ಸ್ಪಂದನ. ಅದರ ಮನೆಯ ಹಂಬಲವು ಆತಂಕದ ಮುಖವಾಡವನ್ನು ಧರಿಸಿದೆ. ಮನೆಯ ಹಂಬಲಕ್ಕೆ ವಾದವೇ ಪರಿಹಾರವಲ್ಲ, ಅದನ್ನು ತಲುಪುವ ಅನುಭವವೇ ಪರಿಹಾರ.

ನಿಮ್ಮಲ್ಲಿರುವ ಭಯವು ಚಾರಿತ್ರ್ಯದೋಷವಲ್ಲ, ಅದು ಮೂಲದಿಂದ ದೂರವಾದ ಆತ್ಮದ ಸ್ಪಂದನ. ಅದರ ಮನೆಯ ಹಂಬಲವು ಆತಂಕದ ಮುಖವಾಡವನ್ನು ಧರಿಸಿದೆ. ಮನೆಯ ಹಂಬಲಕ್ಕೆ ವಾದವೇ ಪರಿಹಾರವಲ್ಲ, ಅದನ್ನು ತಲುಪುವ ಅನುಭವವೇ ಪರಿಹಾರ.

## ಹೃದಯ ವಿಶ್ರಾಂತಗೊಂಡಾಗ, ಜೀವನ ಪ್ರವಹಿಸುತ್ತದೆ

ಭಗವದ್ಗೀತೆ ಇದನ್ನು ಶತಮಾನಗಳ ಅವಲೋಕನದ ನಂತರವೂ ಅದ್ಭುತವಾಗಿರುವ ನಿಖರತೆಯಿಂದ ಕಟ್ಟಿಕೊಡುತ್ತದೆ.  ಹದಿನೇಳನೆಯ ಅಧ್ಯಾಯದಲ್ಲಿ ಕೃಷ್ಣ ಹೇಳುತ್ತಾನೆ, "...ಯೋ ಯಚ್ಛ್ರದ್ಧಃ ಸ ಏವ ಸಃ," ಅರ್ಥಾತ್, "ವ್ಯಕ್ತಿಯ ಶ್ರದ್ಧೆ ಯಾವುದರ ಮೇಲಿರುವುದೊ, ಆತ ಅದೇ ಆಗುತ್ತಾನೆ." ಈ ಶಬ್ದಗಳನ್ನು ನಿಧಾನವಾಗಿ ಓದಿಕೊಳ್ಳುವಂತೆ ನಿಮಗೆ ಸೂಚಿಸುತ್ತಿದ್ದೇನೆ. ಈ ಶಬ್ದಗಳು, ನೀವು ಏನ್ನು ನಂಬುತ್ತೀರೊ ಅದರ ಕುರಿತಾಗಿ ಹೇಳುತ್ತಿಲ್ಲ; ನಿಮ್ಮ ಹೃದಯ ಎಲ್ಲಿದೆ ಹಾಗು ನಿಮ್ಮ ಅಂತರಾತ್ಮ ಯಾವುದನ್ನು ನಂಬುತ್ತದೆಯೆಂಬುದರ ಬಗ್ಗೆ ಹೇಳುತ್ತಿದೆ. ಈ ಘೋಷಣೆಯು ಮೂಲಭೂತವಾದುದು: ತನ್ನಂತರಾಳದಲ್ಲಿ ಯಾವುದನ್ನು ಹೃದಯ ನಂಬುತ್ತದೊ, ಅದು ಬದುಕಿನ ದಿಕ್ಕನ್ನಷ್ಟೆ ಅಲ್ಲದೆ, ಆತ್ಮದ ಸತ್ತ್ವವನ್ನೇ ರೂಪಿಸುತ್ತದೆ.

ಇದು ಸಮಾಧಾನ ಹಾಗು ಮುಕ್ತ ಭಾವಗಳೆರಡನ್ನೂ ತರುತ್ತದೆ. ಸಮಾಧಾನವನ್ನು ನೀಡುವುದೇಕೆಂದರೆ, ನಾವು ಜೀವಿಸುವ ಬದುಕು ನಾವು ಆಳವಾಗಿ ನಂಬಿದುದರ ಅಭಿವ್ಯಕ್ತಿ ಎಂಬರ್ಥ ನೀಡುತ್ತದೆ. ಅದು ನಾವು ಏನನ್ನು ನಂಬುವೆವೆಂದು ಹೇಳುವುದಲ್ಲ; ಹೃದಯವು ಮೆಲ್ಲನೆ, ಕಾಲಾಂತರದಲ್ಲಿ ಎಲ್ಲಿ ಒತ್ತುಕೊಟ್ಟಿದೆ ಎಂಬುದು. ಶ್ರದ್ಧೆಯು ಭಯದಲ್ಲಿ ನೆಲೆಸಿದರೆ, ಜೀವನವು ಸುರಕ್ಷೆ ಹಾಗು ಪಲಾಯನದ ಸುತ್ತಲೂ ರೂಪುಗೊಳ್ಳುತ್ತದೆ. ಮುಕ್ತ ಭಾವ ತರುವುದೇಕೆಂದರೆ, ಇದು ಅಗತ್ಯ ಬದಲಾವಣೆಯೆನ್ನುವುದು ಪ್ರತಿ ಕಾರ್ಯ, ಪ್ರತಿ ವಿಚಾರವನ್ನು ಮರುಹೆಣೆಯುವುದಲ್ಲವೆಂಬ

ಅರ್ಥ ನೀಡುತ್ತದೆ. ಇದು, "ನನ್ನ ಹೃದಯವೆಲ್ಲಿ ನೆಲೆಗೊಂಡಿದೆ? ಅದು, ನಾನು ನಿಜವಾಗಲೂ ಆಯ್ದುಕೊಳ್ಳುವ ದಿಶೆಯೆ?" ಎಂದು ಕೇಳುವ ಮೂಲಭೂತ ಬದಲಾವಣೆ.

ಹೃದಯವು ಅಪಾಯದ ಕಡೆಗಲ್ಲದೆ ಸತ್ಯದ ಕಡೆಗೆ ಒತ್ತುಕೊಡುವಂತೆ ಶ್ರದ್ಧೆ ಪಲ್ಲಟಗೊಂಡಾಗ, ಅದರೊಡನೆ ಉಳಿದೆಲ್ಲವೂ ಬದಲಾಯಿಸುತ್ತವೆ. ಪ್ರಯತ್ನವಿಲ್ಲದೆ ಎಲ್ಲವೂ ಒಂದೇ ಬಾರಿ ಆಗುವುದಿಲ್ಲವಾದರೂ, ಸಾಗರವನ್ನು ಕಂಡುಕೊಂಡ ನದಿಗೆ ಯಾವ ದಿಕ್ಕಿನಲ್ಲಿ ಹರಿಯಬೇಕೆಂದು ಹೇಳುವ ಅಗತ್ಯವಿಲ್ಲದಂತೆಯೆ, ಬದಲಾವಣೆಯು ಸಹಜವಾಗಿ ಆಗುತ್ತದೆ.

## ನದಿ ಮತ್ತು ಅದರ ಹೆಸರು

ಫೆಬ್ರವರಿ 2, 2026ರ ಸಂದೇಶ, 'ವಿಭಜಿತ ಹೃದಯ' ನೆನಪಿದೆಯೆ? ವಿಭಜಿಸುವ ಭಯವು ಬಾಹ್ಯ ಆಗಂತುಕನಲ್ಲ, ಅದು ತಪ್ಪು ದಿಕ್ಕಿನಲ್ಲಿ ಹರಿಯುತ್ತಿದ್ದ ನದಿಯೆಂದು ಕಂಡುಕೊಳ್ಳುವ ಮೂಲಕ ಅದನ್ನು ಇಲ್ಲಿ ಪೂರ್ಣಗೊಳಿಸುತ್ತಿದ್ದೇವೆ. ನದಿಯೊಂದು ತನ್ನ ಹೆಸರನ್ನು ಕಲಿತುಕೊಳ್ಳಬಹುದು. ಆ ಯುವತಿ ಹೊಸತೇನನ್ನೂ ಕಲಿತುಕೊಳ್ಳಲಿಲ್ಲ, ಆಕೆ ಹಳೆಯದನ್ನು ನೆನಪಿಸಿಕೊಂಡಳಷ್ಟೆ. ಆಕೆ ಕಂಡುಕೊಂಡ ಸಾಮರ್ಥ್ಯ ಆಕೆಯಲ್ಲಿ ಎಂದಿನಿಂದಲೂ ಇದ್ದರೂ, ಆಕೆಯ ಜೀವನದಲ್ಲಿ ಬಹುಕಾಲ ಅದು ಭಯವಾಗಿ ವ್ಯಕ್ತಗೊಂಡಿತ್ತು. ಈಗ, ಶಾಂತವಾಗಿ, ಪೂರ್ವಸ್ಥಿತಿಗೆ ಮರಳಿದಂತೆ ಅದು ತನ್ನ ನಿಜವಾದ ದಿಕ್ಕನ್ನು ಕಂಡುಕೊಳ್ಳುತ್ತಿದೆ.  ಅಗತ್ಯವಾಗಿದ್ದುದನ್ನೇ ಅವಳು ಮಾಡಿದ್ದಳು: ನದಿ ತನ್ನ ಹೆಸರನ್ನು ಕಂಡುಕೊಳ್ಳುವವರೆಗೆ ನಿಶ್ಚಲವಾಗಿ ಕುಳಿತುಕೊಳ್ಳುವುದು.
ಶ್ರದ್ಧೆಯನ್ನು ಪ್ರಯತ್ನದಿಂದ ಹುಟ್ಟಿಸಲಾಗದು. ಗಹನಾರ್ಥದಲ್ಲಿ, ಅದು ಆತ್ಮದ ನೆನಪು. ನಮ್ಮಲ್ಲಿ ಪ್ರತಿಯೊಬ್ಬರ ಒಳಗಿನ ಯಾವುದೊ ಒಂದಕ್ಕೆ ಮೂಲನೆಲೆಯ ದಿಕ್ಕು ತಿಳಿದಿದೆ. ಧ್ಯಾನದ ನಂತರದ ಪ್ರಶಾಂತಿಯಲ್ಲಿ, ಹೊರಗಿನಿಂದ ಸಂಪೂರ್ಣವೆಂದು ಕಂಡುಬರುವ ಜೀವನದಲ್ಲಿನ ವಿವರಿಸಲಾಗದ ಅತೃಪ್ತಿಯಲ್ಲಿ, ನಾವು ಅನುಭವಿಸುವ ತೀವ್ರ ಹಂಬಲದಲ್ಲಿ, ಮುಂಜಾನೆ ಕಂಡುಬರುವ ಆ ಕ್ಷೋಭೆಯಲ್ಲಿ, ಆತ್ಮ ನೆನಪಿಸಿಕೊಳ್ಳುತ್ತಿದೆಯೆಂಬ ಸಂಕೇತವಿದೆ. ಅದು, ಇನ್ನೂ ಪೂರ್ಣ ಬೆಳೆಯದಿದ್ದರೂ, ಸ್ಪಷ್ಟವಾಗಿ ಜೀವಂತವಾಗಿರುವ ಶ್ರದ್ಧೆಯ ಅತಿ ಸರಳ ರೂಪ.
ಅದು ಏನಾಗಿ ಬೆಳೆಯುತ್ತದೆ ಹಾಗು ಒಂದೇ ಕುದಿಯುವ ನೀರಿನ ಪಾತ್ರೆಯಲ್ಲಿ ಬೆಂದ ಆಲೂಗಡ್ಡೆ ಮತ್ತು ಮೊಟ್ಟೆಯಂತೆ, ಒಂದೇ ಧ್ಯಾನಮಂದಿರದಲ್ಲಿ, ಅದೇ ಮೌನದಲ್ಲಿ, ಅದೇ ಪ್ರಾಣಾಹುತಿ ಪಡೆಯುವ, ಅಕ್ಕಪಕ್ಕ ಕುಳಿತ ಇಬ್ಬರು ವ್ಯಕ್ತಿಗಳು, ಆ ಬೈಠಕಿನಿಂದ ವಿಭಿನ್ನವಾಗಿ ಹೊರಹೊಮ್ಮಲು ಯಾವುದು ನಿರ್ಣಾಯಕವಾಗಿದೆ ಎಂಬ ಪ್ರಶ್ನೆಯನ್ನು ಮುಂದಿನ ಸಂದೇಶದಲ್ಲಿ ನೋಡೋಣ.

*Shraddha is not something to be generated by effort. In the deepest sense, it is the memory of the soul. Something within every one of us already knows the direction home. The longing we feel, the stirring that comes in the early morning, in the quiet after meditation, and in the inexplicable dissatisfaction with a life that looks complete from the outside, is the soul remembering. It is shraddha in its earliest form, not yet fully grown, but unmistakably alive.*

ಪ್ರೇಮ ಮತ್ತು ಪ್ರಾರ್ಥನೆಗಳೊಂದಿಗೆ,
ಕಮಲೇಶ್

ಪೂಜ್ಯ ಬಾಬೂಜಿ ಮಹಾರಾಜರ 127ನೇ ಜಯಂತ್ಯೋತ್ಸವದಂದು ನೀಡಲಾದ ಸಂದೇಶ
ಮೇ 4, 5, ಮತ್ತು 6, 2026, ಯೋಗಾಶ್ರಮ ಷಹಜಹಾನ್‌ಪುರ

## *There's More Waiting For You*

to go a little deeper

### HEARTFULNESS APP

A Quiet Place to Start

Carry your practice with you — download the free app and connect with a personal trainer anytime.

Free Download. Daily practice. Trainer always Available.

Heartfulnessapp.org

### MASTERCLASSES

Go Deeper at Home

Learn with Daaji relaxation, meditation, cleaning, and prayer through three freely offered video sessions.

Free Videos. Learn from Daaji. 3 classes.

Heartfulness.org/global/masterclass

### RETREAT

Time for Just You

Step away from the noise and into a peaceful weekend that quietly deepens everything.

Peaceful Setting. Deepen Practice. Weekend Stays.

Heartfulness.org/global/retreat

### HEARTSPOTS

Find a Centre Near You

Your nearest meditation centre is closer than you think at no cost.

6000+ Centres. Heartful Community. Free to Visit.

Heartspots.heartfulness.org

Scan to download the free app, always there when you need it.
Start with a guided session, and let the practice find its own rhythm in you.
The journey inward begins with a single, still moment.

heartfulness . purity weaves destiny . heartfulness.org

heartfulness
purity weaves destiny